



ಜಪಾನಿನ ಮ್ಯೂರಾ ರೈಸ್ ಆರ್ಟ್ ಹಾರ್ವೆಸ್ಟ್ ಉತ್ಸವ


ರಾಯಚೂರಿನಲ್ಲಿ ಭತ್ತದ ಬೆಳೆಯಲ್ಲಿ ಅರಳಿದ ನಟ ಪುನೀತ್ ರಾಜ್‌ಕುಮಾರ್ ಚಿತ್ರ



ಮೌಂಟ್ ಇವಾಕಿಯ ದೊಡ್ಡ ಚಿತ್ರವನ್ನು ಮೂಡಿಸಿದರು. ಭತ್ತದ ಗದ್ದೆಯಲ್ಲಿ ಸುಂದರವಾಗಿ ಕಂಡ ಇವಾಕಿ ಪರ್ವತ ಜಪಾನೀಯರಲ್ಲಿ ಉತ್ಸಾಹವನ್ನು ಇಮ್ಮಡಿಗೊಳಿಸಿತ್ತು.

ಈ ಕಲಾ ಪ್ರಕಾರವನ್ನು ಆರಂಭಿಸಿದ ನಂತರದ 9 ವರ್ಷಗಳ ಕಾಲವೂ ಮೌಂಟ್ ಇವಾಕಿ ಚಿತ್ರವನ್ನೇ ಬಿಡಿಸುತ್ತಿದ್ದ ಸ್ಥಳೀಯರು, ಸಂಕೀರ್ಣ ವಿನ್ಯಾಸಕ್ಕೆ ಕೈ ಹಾಕಿರಲಿಲ್ಲ. ಅನುಭವದಿಂದಲೇ ಪಳಗಿದ ಅವರು, ನಂತರದ ವರ್ಷಗಳಲ್ಲಿ ಹಲವು ಚಿತ್ರಗಳನ್ನು ಭತ್ತದ ಗದ್ದೆಗಳಲ್ಲಿ ಮೂಡಿಸಲು ಕಲಿತರು. ಈ ಕಲೆಯನ್ನು ಕಣ್ತುಂಬಿಕೊಳ್ಳಲೆಂದೇ ಅಲ್ಲಲ್ಲಿ ವೀಕ್ಷಣಾ ಟವರ್‌ಗಳನ್ನು ಕಟ್ಟಲಾಯಿತು. ಕಾಲ ಸರಿದಂತೆ ಪ್ರವಾಸಿಗರನ್ನು ಸೆಳೆಯುವ ವಾಹಿನಿಯೂ ಆಗಿ ಈ ಕಲೆ ಬದಲಾಯಿತು. 2006ರಲ್ಲಿ ಈ ಕಲೆಯನ್ನು ನೋಡಲು ಸುಮಾರು 2 ಲಕ್ಷ ಜನರು ಇಲ್ಲಿಗೆ ಭೇಟಿ ನೀಡಿದ್ದರು.

ವರ್ಷಗಳು ಉರುಳಿದಂತೆ ವಿನ್ಯಾಸಗಳು ಬದಲಾದವು. ಟ್ಯಾಂಬೊ ಆರ್ಟ್ ಉತ್ಸವವನ್ನೂ ಆರಂಭಿಸಲಾಯಿತು. ಲಿಯೊನಾರ್ಡೊ ಡಾ ವಿಂಚಿ, ಮೊನಾಲಿಸಾ, ಬೋಧಿಸತ್ವ, ಮೌಂಟೇನ್ ಗಾಡ್, ಗ್ರೇಟ್ ವೇವ್ ಆಫ್ ಕನಗವ, ಹೀಗೆ ಹತ್ತು ಹಲವು ಚಿತ್ತಾರಗಳು ಭತ್ತದ ಗದ್ದೆಯಲ್ಲಿ ನಳನಳಿಸಿದವು. ಕಾರ್ಟೂನ್‌ಗಳು, ರಾಜ ರಾಣಿಯರ ಚಿತ್ರಗಳು, ಕ್ರೀಡೆಗಳು, ಪ್ರಾಣಿಗಳು, ಜನಸಾಮಾನ್ಯರ ಚಿತ್ರಗಳು ಕೂಡ ಆ ಪಟ್ಟಿಗೆ ಸೇರುತ್ತಾ ಹೋದವು.

ಇನಕಾದಾಟೆದಲ್ಲಿ ಈಗಲೂ ಪ್ರತಿ ವರ್ಷ ಗ್ರಾಮಸ್ಥರು ಸಭೆ ಸೇರಿ, ಈ ವರ್ಷ ಭತ್ತದಲ್ಲಿ ಏನು ವಿನ್ಯಾಸ ಮಾಡಬೇಕೆಂದು ತೀರ್ಮಾನಿಸುತ್ತಾರೆ. ಎಲ್ಲರೂ ಒಟ್ಟುಗೂಡಿ ಈ ಕಲೆಯ ಸಾಕಾರಕ್ಕೆ ಕೈಜೋಡಿಸುತ್ತಾರೆ.

ಬಹಳ ನಾಜೂಕಾಗಿರುವ ಈ ಕಲೆ ಕ್ರಿಯಾಶೀಲತೆ ಬೇಡುತ್ತದೆ. ಬಿತ್ತನೆಗೂ ಮುನ್ನ ಆ ಚಿತ್ರದ ಸ್ಕೆಚ್ ಹಾಕಿಕೊಳ್ಳುತ್ತಾರೆ. ಆನಂತರ ಬಣ್ಣಗಳಿಗಾಗಿ ತಳಿಗಳ ಆಯ್ಕೆ ನಡೆಯುತ್ತದೆ. ಬಿಳಿ, ಕೆಂಪು, ನೇರಳೆ, ಹಳದಿ ಬಣ್ಣದ ಭತ್ತದ ತಳಿಗಳನ್ನು ಆರಿಸಿ, ಸ್ಕೆಚ್‌ಗೆ ತಕ್ಕಂತೆ, ಇರುವ ಜಾಗದಲ್ಲಿ ಅಳತೆಯೊಂದಿಗೆ ಭತ್ತ ನಾಟಿ ಮಾಡಲಾಗುತ್ತದೆ. ನಾಟಿ ಮಾಡಿದ ಮೂರ್ನಾಲ್ಕು ತಿಂಗಳಲ್ಲಿ ತೆನೆ ತೂಗುತ್ತದೆ. ಚಿತ್ರ ಅಂದುಕೊಂಡ ರೀತಿ ಬರುತ್ತಿದೆಯೇ ಎಂದು ಆಗಾಗ್ಗೆ ಪರಿಶೀಲನೆ ನಡೆಸಲಾಗುತ್ತದೆ. ಕಾಲ ಸರಿದಂತೆ ತನ್ನ ಗಡಿಯನ್ನೂ ವಿಸ್ತರಿಸಿಕೊಂಡಿದೆ ಭತ್ತದ ಕಲೆ. ಚೀನಾ, ಭಾರತಕ್ಕೂ ಕಾಲಿಟ್ಟಿದ್ದು, ಮಹಾರಾಷ್ಟ್ರ, ಕೇರಳ ಹಾಗೂ ತೆಲಂಗಾಣದಲ್ಲಿ ಈ ಪರಿಕಲ್ಪನೆಯ ಪ್ರಯೋಗಗಳು ನಡೆದಿವೆ. ಸದ್ಯ ಕರ್ನಾಟಕವೂ ಆ ಪಟ್ಟಿಯಲ್ಲಿ ಈಚೆಗೆ ಸೇರಿಕೊಂಡಿದೆ.

ತೆಲಂಗಾಣದ ನಿಜಾಮಾಬಾದ್‌ನಲ್ಲಿ ಚಿನ್ನಿ ಕೃಷ್ಣುಡು ಎಂಬುವರು ತಮಗಿದ್ದ 16 ಗುಂಟೆ ಜಾಗದಲ್ಲಿ ಐದು ವಿಭಿನ್ನ ಭತ್ತದ ತಳಿಗಳೊಂದಿಗೆ ತಮ್ಮ ಅಪ್ಪ ಅಮ್ಮನ ಚಿತ್ರವನ್ನೇ ಬಿಡಿಸಿ ದೇಶದ ಗಮನ ಸೆಳೆದಿದ್ದರು. ಮಹಾರಾಷ್ಟ್ರದ ಪುಣೆಯ 73 ವರ್ಷದ ಶ್ರೀಕಂಠ ಇಂಗಾಲ್‌ಹಲಿಕರ್ ಎಂಬುವರು ಕೂಡ ಭತ್ತದಲ್ಲೇ ಕ್ರಿಯಾಶೀಲತೆಯ ಕಲೆ ಕಟ್ಟಿದವರು. ಪಶ್ಚಿಮಘಟ್ಟದ ಅಪರೂಪದ ಜೀವಪ್ರಭೇದಗಳನ್ನು ತಮ್ಮ ಕಲೆಯ ವಸ್ತುವಾಗಿಸಿಕೊಂಡ ಅವರು, ಏಳು ವರ್ಷಗಳ ಹಿಂದೆಯೇ ಈ ಕಲೆಯಲ್ಲಿ ಪ್ರಯೋಗ ಮಾಡಿದವರು. 2016ರಲ್ಲಿ ಚಿರತೆ, ಹದ್ದು, ಪಾರಿವಾಳ, ಹಾವಿನ ಬೃಹತ್ ಚಿತ್ರಗಳನ್ನು ಭತ್ತದ ಗದ್ದೆಗಳಲ್ಲಿ ಮೂಡಿಸಿದವರು. ಈಚೆಗೆ 'ಆಸ್ಕರ್ ವಿನ್ನರ್ ರಘು' ಆನೆಯ ಚಿತ್ರವೂ ಅವರ ಸಂಗ್ರಹಕ್ಕೆ ಸೇರಿಕೊಂಡಿದೆ.

ಕೇರಳ ಜಿಲ್ಲೆಯ ವಯನಾಡಿನ ರೈತ ಜಾನ್ಸನ್ ಅವರಿಗೂ ಭತ್ತದ ಕಲೆ ಎಂದರೆ ಅಚ್ಚುಮೆಚ್ಚು. ಅವರು ವಿನ್ಯಾಸಗೊಳಿಸಿದ ಅಶೋಕ ಚಕ್ರ, ಪೂಕಲಂ, ಕೇರಳ ನಕ್ಷೆ, ಹಣತೆ, ಹೂವು–ಚಿಟ್ಟೆಗಳಿಂದ ತುಂಬಿದ ಹೃದಯದ ಚಿತ್ರಗಳು ಕಲಾರಸಿಕರ ಮನ ಸೆಳೆದಿವೆ. ಕರ್ನಾಟಕದ ಸತ್ಯನಾರಾಯಣ ಅವರು ಕೂಡ ಈಗ ಈ ಭತ್ತದ ಕಲಾವಿದರಲ್ಲಿ ಒಂದಾಗಿದ್ದಾರೆ.

ಚಿತ್ರಕೃಪೆ: ವಿಕಿಕಾಮನ್ಸ್